ಕರ್ನಾಟಕ ವಿಧಾನಸಭೆ

ಬುಧವಾರ ೩೦ನೇ ಜನವರಿ ೨೦೦೨ ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೨೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

(ಬಿ.ಜೆ.ಪಿ. ಸದಸ್ಯರು ಸದನದ ಬಾವಿಗೆ ಬಂದು ಧಿಕ್ಕಾರ-ಧಿಕ್ಕಾರ ಎಂದು ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ) -

ಅಧ್ಯಕ್ಷರು:- ತಾವು ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. I am requesting them. ನಾನು ಮೂರು ದಿವಸಗಳಿಂದ ನೋಡುತ್ತಿದ್ದೇನೆ. ಏನೆಂದರೆ, ನಿಮ್ಮವರು ಮಾತನಾಡುವಂಥ ಸಂದರ್ಭದಲ್ಲಿ ನೀವು ಯಾರೂ ಗಲಾಟೆ ಮಾಡುವುದಿಲ್ಲ. ಆದರೆ, ಅವರು ಎದ್ದು ನಿಂತು ಮಾತನಾಡುವಾಗ ನೀವು ಗಲಾಟೆ ಮಾಡುತ್ತೀರಿ. ಇದು ಯಾವ ನ್ಯಾಯ? ನೀವೇಹೇಳಿ? ನೀವೂ ಮಾತನಾಡಿ. ಅವರೂ ಮಾತನಾಡಲಿ. Let us hear them also. ಈಗ ಅವರೂ ಕೂಡ ಏನು ಮಾತನಾಡುತ್ತಾರೆ ಎನ್ನತಕ್ಕಂಥದ್ದನ್ನು ಕೇಳೋಣ. ಅವರು ಎದ್ದು ಮಾತನಾಡಿದಾಗ ನೀವು ಗಲಾಟೆ ಮಾಡಿದರೆ ಹೇಗೆ? ನಿಮ್ಮದು ಕೇಳಿದ ಹಾಗೆ ಅವರದ್ದೂ ನಾನು ಕೇಳಬೇಕು ತಾನೇ? ಸದಸ್ಯರು ಏನೋ ಅಭಿಪ್ರಾಯ ಕೊಡಬೇಕೆಂದಿದ್ದಾರೆ. Let us hear them. ಮಾನ್ಯ ಮುದ್ದ ಹನುಮೇಗೌಡರು ಎರಡು ನಿಮಿಷದಲ್ಲಿ ಮುಗಿಸಿಯಾದಮೇಲೆ ನೀವೂ ಮಾತನಾಡಿ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ ಅವರದ್ದೂ ಕೇಳೋಣ. ಏನೂ ಬರೆದುಕೊಳ್ಳಬೇಡಿ.

XXX

xxx ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿಕೊಂಡಿರುವುದಿಲ್ಲ.

(ಗೊಂದಲ)

---

xxx ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿಕೊಂಡಿರುವುದಿಲ್ಲ.

ಅಧ್ಯಕ್ಷರು:- ಮಾನ್ಯ ಶೆಟ್ಟರ್‌ರವರೇ, ತಾವು ಏನು ಹೇಳಿದ್ದೀರೋ ಹಾಗೆ ಅವರೂ ತಮ್ಮ ಅಭಿಪ್ರಾಯ ತಿಳಿಸಲಿ. ಮಾನ್ಯ ಚಂದ್ರೇಗೌಡರವರೆ, ನೀವು ಹಾಗೂ ಪ್ರತಿ ಪಕ್ಷಗಳ ನಾಯಕರೆಲ್ಲರೂ ನನ್ನ ಕೊಠಡಿಗೆ ಬನ್ನಿ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಿ ಯಾವುದಾದರೊಂದು ಇತ್ಯರ್ಥಕ್ಕೆ ಬರೋಣ. ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು ೧೧.೨೭ಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧಗಂಟೆಯ ನಂತರ ಸಭೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ೧೧.೫೩ ಗಂಟೆಗೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಬಿಜೆಪಿ ಪಕ್ಷದ ಮಾನ್ಯ ಎಲ್ಲಾ ಸದಸ್ಯರು ಬಾವಿಯಲ್ಲಿದ್ದರು)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಚರ್ಚೆಯಾದರೂ ಏನೂ ಆಗುತ್ತಿಲ್ಲ. ಇವತ್ತು ರೈತರು ಸ್ಟೈಕ್ ಮಾಡುತ್ತಿದ್ದಾರೆ. ವಿದ್ಯುತ್ ಅಭಾವ ಇದೆ ಎಂದು ರೈತರು ಸ್ಟೈಕ್ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಲಾ ಮಿನಿಸ್ಟರ್ ಏನೋ ಹೇಳುವುದಕ್ಕೆ ಹೊರಟಿದ್ದಾರೆ. ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇವತ್ತು ರೈತರಿಗೆ ವಿದ್ಯುತ್ ಕೊಡುವುದಕ್ಕೆ ಆಗುತ್ತಿಲ್ಲ, ಈ ರಾಜ್ಯದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಲೂಟಿಯಾಗುತ್ತಿದೆ. ಆದರೂ ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡುವುದಕ್ಕೆ ಹಿಂದೇಟು ಹಾಕುತ್ತಿದ್ದೀರಿ.

(ಗೊಂದಲ)